# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 88 |
| 2 | ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 19-12-2022 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಪ್ರಶ್ನೆ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | 545 ಪಿ.ಎಸ್.ಐ ಹುದ್ದೆಗಳ ನೇಮಕಾತಿಯ ಸಮಯದಲ್ಲಿ ದೈಹಿಕ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವುದು ನಿಜವೇ; | ಕೆ.ಎಸ್.ಆರ್.ಪಿ. ಪರೇಡ್ ಗ್ರೌಂಡ್, 2ನೇ ಪಡೆ, ಬೆಳಗಾವಿ ಕೇಂದ್ರದಲ್ಲಿ ಒಬ್ಬ ಅಭ್ಯರ್ಥಿಯು ದೈಹಿಕ ಪರೀಕ್ಷೆಗೆ ಹಾಜರಾದ ಸಂದರ್ಭದಲ್ಲಿ ನಿಯಮಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿರುವ ಕಾರಣ ಸದರಿ ಅಭ್ಯರ್ಥಿಯ ವಿರುದ್ಧ ಪೊಲೀಸ್ ಆಯುಕ್ತರು, ಬೆಳಗಾವಿ ನಗರ ರವರು ಪ್ರಕರಣ ದಾಖಲಿಸಿ ಕ್ರಮ ಕೈಗೊಂಡಿರುತ್ತಾರೆ. |
| (ಆ) | ದೈಹಿಕ ಪರೀಕ್ಷೆಯ ವೇಳೆ ಸ್ಟಿರಾಯ್ಡ್‌ಗಳನ್ನು ಬಳಸಿ ಪಾಸಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಗಮನಕ್ಕೆ ಬಂದಿರುವುದಿಲ್ಲ. |
| (ಇ) | ದೈಹಿಕ ಪರೀಕ್ಷೆ ವೇಳೆ ಕೆಲವು ಅಭ್ಯರ್ಥಿಗಳು ಹೆಚ್ಚಿನ ಎತ್ತರವನ್ನು ತೋರಿಸಲು ವಿಗ್ ಧರಿಸಿರುವುದು ನಿಜವೇ; | ದೈಹಿಕ ಪರೀಕ್ಷೆಗಳನ್ನು ನಡೆಸಿದ ಸಂದರ್ಭದಲ್ಲಿ ಕೆ.ಎಸ್.ಆರ್.ಪಿ. ಪರೇಡ್ ಗ್ರೌಂಡ್, 2ನೇ ಪಡೆ, ಬೆಳಗಾವಿ ಕೇಂದ್ರದಲ್ಲಿ ದಿನಾಂಕ: 12.08.2021 ರಂದು ದೈಹಿಕ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಯಾದ ಬಿ.ಎಸ್ ದುರದುಂಡಿ, ಅರ್ಜಿ ಸಂಖ್ಯೆ: 2299067 ರವರು ತನ್ನ ಎತ್ತರ ಕಡಿಮ ಇದೆ ಎಂಬುದರ ಬಗ್ಗೆ ಮಾಹಿತಿ ಇದ್ದರೂ ಸಹ ಉದ್ದೇಶ ಪೂರ್ವಕವಾಗಿ ತನ್ನ ಎತ್ತರವನ್ನು ಹೆಚ್ಚಿಸುವ ಉದ್ದೇಶದಿಂದ ತನ್ನ ತಲೆಮೇಲೆ ಥರ್ಮಕೋಲ್‌ನ 03 ತುಣುಕುಗಳನ್ನು ಇಟ್ಟುಕೊಂಡು ಅದರ ಮೇಲೆ ಕೃತಕ ಕೂದಲಿನ ವಿಗ್ ಹಾಕಿಕೊಂಡು ಮೋಸ ಮಾಡಿ ಅರ್ಹತೆ ಗಿಟ್ಟಿಸಿಕೊಳ್ಳಲು ನಿಯಮ ಬಾಹಿರವಾಗಿ ಪ್ರಯತ್ನಿಸಿರುವುದನ್ನು ಅಲ್ಲಿನ ಅಧಿಕಾರಿಯು ಗುರುತಿಸಿ ಸದರಿ ಅಭ್ಯರ್ಥಿಯ ವಿರುದ್ಧ ಬೆಳಗಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಹಾಗೂ ಸದರಿ ವರದಿಯನ್ನು ನೇಮಕಾತಿ ಕಚೇರಿಗೆ ಕಳುಹಿಸಿರುತ್ತಾರೆ.<br><br>ಅಭ್ಯರ್ಥಿಯ ವಿರುದ್ಧ ಪ್ರಕರಣವು ದಾಖಲಾದ ಹಿನ್ನೆಲೆಯಲ್ಲಿ ನೇಮಕಾತಿ ಅಧಿಸೂಚನೆಯಲ್ಲಿ ಪ್ರಸ್ತಾಪಿಸಿರುವಂತೆ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸಿರುವುದರಿಂದ, ನೇಮಕಾತಿ ಕಚೇರಿಯಿಂದ ನಿಯಮಾನುಸಾರ ಅಭ್ಯರ್ಥಿಯನ್ನು ಪೊಲೀಸ್ ಇಲಾಖೆಯು ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಖಾಯಂ ಆಗಿ ಡಿಬಾರ್ ಮಾಡಲಾಗಿರುತ್ತದೆ. |

| | | |
|---|---|---|
| (ಈ) | ದೈಹಿಕ ಪರೀಕ್ಷೆಯಲ್ಲೂ ಅಕ್ರಮವಾಗಿರುವುದರಿಂದ 545 ಹುದ್ದೆಗಳ ಪರೀಕ್ಷೆಗಾಗಿ ಮತ್ತೊಮ್ಮೆ ಪಾರದರ್ಶಕವಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೂ ದೈಹಿಕ ಪರೀಕ್ಷೆ ಮಾಡಲಾಗುತ್ತದೆಯೇ? (ವಿವರಿಸುವುದು) | ಅಂತಹ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಒಇ 164 ಪಿಇಐ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು